III

Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ


| | | | |
|---|---|---|---|
| सं—1 | नई दिल्ली सोमवार, आगष्ट 5, 1985 | श्रावण 14, 1907 (शक) | खण्ड—3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |


## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely.—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬; (೩) ಭಾರತ ಅನುಭೋಗ ಅಧಿನಿಯಮ, ೧೮೮೨; (೪) ಬೇಸಾಯಗಾರ ಸಾಲ ಅಧಿನಿಯಮ ೧೮೮೪; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10 + 13 = 23

# ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, 1946

(1946ರ ಅಧಿನಿಯಮ ಸಂಖ್ಯೆ 22)

[ಮೇ 1, 1985 ರಂದು ಜಾರಿಯಲ್ಲಿದ್ದಂತೆ] [1946ರ ಏಪ್ರಿಲ್ 23]

ಅಭ್ರಕ ಗಣಿ ಕೈಗಾರಿಕೆಯಲ್ಲಿ ನಿಯೋಜಿತರಾದ ಕಾರ್ಮಿಕರ ಕಲ್ಯಾಣಾಭಿವೃದ್ಧಿಯ ಕಾರ್ಯಚಟುವಟಿಕೆಗಳಿಗೆ ಹಣವನ್ನೊದಗಿಸಲು ನಿಧಿಯನ್ನು ರಚಿಸುವುದಕ್ಕಾಗಿ ಅಧಿನಿಯಮ.

ಅಭ್ರಕ ಗಣಿ ಕೈಗಾರಿಕೆಯಲ್ಲಿ ನಿಯೋಜಿತರಾದ ಕಾರ್ಮಿಕರ ಕಲ್ಯಾಣಾಭಿವೃದ್ಧಿಯ ಕಾರ್ಯಚಟುವಟಿಕೆಗಳಿಗೆ ಹಣವನ್ನೊದಗಿಸಲು ನಿಧಿಯನ್ನು ರಚಿಸುವುದು ವಿಹಿತವಾಗಿರುವುದರಿಂದ ;

—ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ :—

1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.—(1) ಈ ಅಧಿನಿಯಮವನ್ನು ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, 1946 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಉಪಕರವನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.—(1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಿಂದ ರಫ್ತಾಗುವ ಯಾವುದೇ ಸ್ಥಿತಿಯಲ್ಲಿರುವ ಎಲ್ಲ ಅಭ್ರಕದ ಮೇಲೆ ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಮೌಲ್ಯಾನುಸಾರವಾಗಿ ಶೇಕಡಾ ಆರು ಕಾಲಿಗೆ ಮೀರದಂಥ ದರದಲ್ಲಿ ಸೀಮಾಶುಲ್ಕವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಕರವಾಗಿ, ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು :

ಪರಂತು, 1947ರ ಏಪ್ರಿಲ್ 1ನೇ ದಿನದವರೆಗೆ, ಹಾಗೆ ನಿಗದಿಪಡಿಸಿದ ಶುಲ್ಕದ ದರವು ಮೌಲ್ಯಾನುಸಾರವಾಗಿ ಶೇಕಡ ಎರಡೂವರೆಯಷ್ಟನ್ನು ಮೀರತಕ್ಕದ್ದಲ್ಲ.

(2) ಪ್ರತಿ ತಿಂಗಳ ಕೊನೆಯ ದಿನದಂದು ಅಥವಾ ಅದರ ಅನಂತರ ಅನುಕೂಲವಾದಷ್ಟು ಬೇಗನೆ, ಆ ತಿಂಗಳಿನಲ್ಲಿ ವಸೂಲು ಮಾಡಲಾದ ಸೀಮಾ ಶುಲ್ಕದ ಉತ್ಪನ್ನವನ್ನು, ಅದರ ಸಂಗ್ರಹ ಮತ್ತು ವಸೂಲಿಗಾಗಿ ವೆಚ್ಚಗಳೇನಾದರೂ ಆಗಿದ್ದರೆ ಅವನ್ನು ಕಳೆದು ಅನಂತರ, (ಇನ್ನು ಮುಂದೆ ನಿಧಿ ಎಂದು ಉಲ್ಲೇಖಿಸಲಾಗುವ) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಎಂದು ಕರೆಯಲಾಗುವ ನಿಧಿಗೆ ಜಮೆ ಮಾಡತಕ್ಕದ್ದು.

3. ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ.—(1) ಅಭ್ರಕ ಗಣಿ ಕೈಗಾರಿಕೆಯಲ್ಲಿ ನಿಯೋಜಿತರಾಗಿರುವ ಕಾರ್ಮಿಕರ ಕಲ್ಯಾಣಾಭಿವೃದ್ಧಿಗೆ ಅವಶ್ಯವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರವು ಅಭಿಪ್ರಾಯ ಪಡುವಂಥ ಕ್ರಮಗಳಿಗೆ ಸಂಬಂಧಿಸಿ ತಗುಲಿದ ವೆಚ್ಚವನ್ನು ಭರಿಸಲು ಕೇಂದ್ರ ಸರ್ಕಾರವು ಈ ನಿಧಿಯನ್ನು ವಿನಿಯೋಗಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಈ ನಿಧಿಯನ್ನು.—

(ಕ) ಅಭ್ರಕ ಗಣಿ ಕೈಗಾರಿಕೆಯಲ್ಲಿ ನಿಯೋಜಿತರಾಗಿರುವ ಕಾರ್ಮಿಕರ ಪ್ರಯೋಜನಕ್ಕಾಗಿ—

(i) ಸಾರ್ವಜನಿಕ ಆರೋಗ್ಯವನ್ನು ಮತ್ತು ನೈರ್ಮಲ್ಯವನ್ನು ಉತ್ತಮಪಡಿಸುವ, ರೋಗವನ್ನು ಪ್ರತಿಬಂಧಿಸುವ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಮತ್ತು ಉತ್ತಮಪಡಿಸುವ ಬಗ್ಗೆ ;

(ii) ನೀರು ಸರಬರಾಜನ್ನು ಮತ್ತು ತೊಳೆಯುವ ಸೌಲಭ್ಯಗಳನ್ನು ಒದಗಿಸುವ ಮತ್ತು ಉತ್ತಮಪಡಿಸುವ ಬಗ್ಗೆ ;

(iii) ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ಮತ್ತು ಉತ್ತಮಪಡಿಸುವ ಬಗ್ಗೆ ;

(iv) ಗೃಹನಿರ್ಮಾಣ ಮತ್ತು ಪುಷ್ಟಿಕರ ಆಹಾರವನ್ನೊಳಗೊಂಡು ಜೀವನಮಟ್ಟವನ್ನು ಉತ್ತಮಗೊಳಿಸುವ, ಸಾಮಾಜಿಕ ಸ್ಥಿತಿಗಳನ್ನು ಸುಧಾರಿಸುವ ಮತ್ತು ಮನೋರಂಜನಾ ಸೌಲಭ್ಯಗಳನ್ನೊದಗಿಸುವ ಬಗ್ಗೆ ;

(v) ಕೆಲಸದ ಸ್ಥಳಕ್ಕೆ ಹೋಗಲು ಮತ್ತು ಅಲ್ಲಿಂದ ಬರಲು ಸಾರಿಗೆಗೆ ಏರ್ಪಾಟು ಮಾಡುವ ಬಗ್ಗೆ

—ನಿರ್ದೇಶಿತವಾದ ಕ್ರಮಗಳಿಗಾಗುವ ಖರ್ಚನ್ನು ;

(ಖ) ನಿಧಿಯನ್ನು ಉಪಯೋಗಿಸಬಹುದಾದಂಥ ಯಾವುದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಯಾವುದೇ ಯೋಜನೆಯ ನೆರವಿಗಾಗಿ ರಾಜ್ಯ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಅಭ್ರಕ ಗಣಿಯ ಒಡೆಯನಿಗೆ, ಏಜೆಂಟನಿಗೆ ಅಥವಾ ವ್ಯವಸ್ಥಾಪಕನಿಗೆ ಕೊಡುವ ಅನುದಾನವನ್ನು ;

(ಗ) 4ನೇ ಪ್ರಕರಣದ ಮೇರೆಗೆ ರಚಿಸಲಾದ ಸಲಹಾ ಸಮಿತಿಗಳ ಸದಸ್ಯರ ಭತ್ಯಗಳು ಏನಾದರೂ ಇದ್ದರೆ, ಅವುಗಳನ್ನು ಮತ್ತು 5ನೇ ಪ್ರಕರಣದ ಮೇರೆಗೆ ನೇಮಿತರಾದ ಅಧಿಕಾರಿಗಳ ಸಂಬಳಗಳು ಮತ್ತು ಭತ್ಯಗಳು ಏನಾದರೂ ಇದ್ದರೆ ಅವುಗಳನ್ನು ಒಳಗೊಂಡು ನಿಧಿಯನ್ನು ನಿರ್ವಹಿಸುವ ಖರ್ಚನ್ನು ;

(ಘ) ನಿಧಿಯಿಂದ ಭರಿಸಬೇಕೆಂದು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದ ಇತರ ಯಾವುದೇ ವೆಚ್ಚವನ್ನು :

—ಭರಿಸಲು ಉಪಯೋಗಿಸಿಕೊಳ್ಳಬಹುದು.

(3) ಯಾವುದೇ ನಿರ್ದಿಷ್ಟ ವೆಚ್ಚವನ್ನು ನಿಧಿಗೆ ಖರ್ಚು ಹಾಕಬಹುದೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(4) ನಿಧಿಯ ಅಂದಾಜು ಜಮಾ ಹಾಗೂ ಖರ್ಚು ಮತ್ತು ಲೆಕ್ಕದ ವಿವರಪಟ್ಟಿಕೆಯ ಸಹಿತವಾಗಿ, ಈ ನಿಧಿಯಿಂದ ಹಣವನ್ನು ಒದಗಿಸಲಾದ ಕಾರ್ಯಚಟುವಟಿಕೆಗಳ ವರದಿಯನ್ನು ಕೇಂದ್ರ ಸರ್ಕಾರವು ಪ್ರತಿವರ್ಷವೂ ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

4. ಸಲಹಾ ಸಮಿತಿಗಳು.—(1) ಈ ಅಧಿನಿಯಮದ ಅಥವಾ ನಿಧಿಯ ನಿರ್ವಹಣೆಯಲ್ಲಿ ಉದ್ಭವಿಸುವ ಯಾವುವೇ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡುವುದಕ್ಕಾಗಿ, ಪ್ರತಿಯೊಂದು ರಾಜ್ಯಕ್ಕೂ ಒಂದಕ್ಕಿಂತ ಹೆಚ್ಚಿಲ್ಲದಂತೆ ತಾನು ಸೂಕ್ತವೆಂದು ಆಲೋಚಿಸಬಹುದಾದಷ್ಟು ಸಲಹಾ ಸಮಿತಿಗಳನ್ನು ಕೇಂದ್ರ ಸರ್ಕಾರವು ರಚಿಸತಕ್ಕುದು.

(2) ಸಲಹಾ ಸಮಿತಿಗಳ ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಿಸತಕ್ಕುದು, ಮತ್ತು ಅವರ ಸಂಖ್ಯೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಬಹುದಾದಷ್ಟು ಇರತಕ್ಕುದು ಮತ್ತು ಅವರನ್ನು ಅಂಥ ರೀತಿಯಲ್ಲಿ ಆಯ್ಕೆಮಾಡತಕ್ಕುದು :

ಪರಂತು, ಪ್ರತಿಯೊಂದು ಸಮಿತಿಯಲ್ಲೂ ಅಭ್ರಕ ಗಣಿ ಒಡೆಯರನ್ನು ಮತ್ತು ಅಭ್ರಕ ಗಣಿ ಕೈಗಾರಿಕೆಯಲ್ಲಿ ನಿಯೋಜಿತರಾದ ಕಾರ್ಮಿಕರನ್ನು ಪ್ರತಿನಿಧಿಸುವ ಸಮಾನ ಸಂಖ್ಯೆಯ ಸದಸ್ಯರಿರತಕ್ಕುದು, ಮತ್ತು ಪ್ರತಿಯೊಂದು ಸಮಿತಿಯಲ್ಲಿ ಕನಿಷ್ಠ ಒಬ್ಬ ಮಹಿಳಾ ಸದಸೆ ಇರತಕ್ಕುದು, ಮತ್ತು ಪ್ರತಿಯೊಂದು ಸಮಿತಿಯಲ್ಲಿ ಕನಿಷ್ಠ ಪಕ್ಷ ಒಬ್ಬನಾದರೂ ಸಂಬಂಧಪಟ್ಟ ರಾಜ್ಯದ ವಿಧಾನ ಮಂಡಲದ ಸದಸ್ಯನಾಗಿರುವವನು ಇರತಕ್ಕುದು,

(3) ಪ್ರತಿಯೊಂದು ಸಲಹಾ ಸಮಿತಿಯ ಅಧ್ಯಕ್ಷನನ್ನು ಕೇಂದ್ರ ಸರ್ಕಾರವು ನೇಮಿಸತಕ್ಕುದು.

(4) ಸಲಹಾ ಸಮಿತಿಯ ಎಲ್ಲ ಸದಸ್ಯರುಗಳ ಹೆಸರುಗಳನ್ನು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

5. ಅಧಿಕಾರಿಗಳ ನೇಮಕ ಮತ್ತು ಅಧಿಕಾರಗಳು.—(1) ನಿಧಿಯನ್ನು ನಿರ್ವಹಿಸಲು ಅಥವಾ ನಿಧಿಯಿಂದ ಹಣವನ್ನು ಒದಗಿಸಲಾದ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಗಳನ್ನು ಮಾಡಲು ಅಥವಾ ಅವುಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ಪರಿಶೀಲಕರನ್ನು, ಕಲ್ಯಾಣ ಆಡಳಿತಗಾರರನ್ನು ಮತ್ತು ತಾನು ಆವಶ್ಯವೆಂದು ಆಲೋಚಿಸುವಂಥ ಇತರ ಅಧಿಕಾರಿಗಳನ್ನು ನೇಮಿಸಬಹುದು.

(2) ಹಾಗೆ ನೇಮಿತನಾದ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ (1860ರ 45ರ) ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕುದು.

(3) ಯಾವನೇ ಪರಿಶೀಲಕನು ಅಥವಾ ಕಲ್ಯಾಣ ಆಡಳಿತಗಾರನು—

(ಕ) ತಾನು ಸೂಕ್ತವೆಂದು ಆಲೋಚಿಸುವಂಥ ಸಹಾಯ ಯಾವುದಾದರೂ ಇದ್ದರೆ ಅದರೊಂದಿಗೆ, ನಿಧಿಯಿಂದ ಆರ್ಥಿಕ ನೆರವು ಪಡೆದ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಮಾಡುವ ಅಥವಾ ಅವುಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಪ್ರವೇಶಿಸುವುದು ಅವಶ್ಯವೆಂದು ತಾನು ಪರ್ಯಾಲೋಚಿಸುವಂಥ ಯಾವುದೇ ಸ್ಥಳವನ್ನು ಯಾವುದೇ ಯುಕ್ತವಾದ ಕಾಲದಲ್ಲಿ ಪ್ರವೇಶಿಸಬಹುದು, ಮತ್ತು

(ಖ) ತನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಗಾಗಿ ಅವಶ್ಯವಾದ ಯಾವುದೇ ಕ್ರಮವನ್ನು ಅಂಥ ಸ್ಥಳದಲ್ಲಿ ಕೈಗೊಳ್ಳಬಹುದು.

6. ನಿಯಮ ರಚನಾಧಿಕಾರ.—(1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧೆ ಬಾರದಂತೆ, ಅಂಥ ನಿಯಮಗಳು—

(ಕ) 2ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಲಾದ ಸೀಮಾಶುಲ್ಕವನ್ನು ಮರುಪಾವತಿ ಮಾಡುವ, ಮಾಫಿ ಮಾಡುವ ಮತ್ತು ವಸೂಲು ಮಾಡುವ ಬಗ್ಗೆ ;

(ಖ) 4ನೇ ಪ್ರಕರಣದ ಮೇರೆಗೆ ರಚಿಸಲಾದ ಸಲಹಾ ಸಮಿತಿಗಳ ರಚನೆ, ಅದರ ಸದಸ್ಯರನ್ನು ಆಯ್ಕೆ ಮಾಡತಕ್ಕ ರೀತಿ, ಅಂಥ ಸದಸ್ಯರ ಪದಾವಧಿಯು, ಅವರಿಗೆ ಸಂದಾಯ ಮಾಡಬೇಕಾದ ಭತ್ಯಗಳು ಏನಾದರೂ ಇದ್ದರೆ ಅವುಗಳ, ಮತ್ತು ಸಲಹಾ ಸಮಿತಿಗಳು ತಮ್ಮ ವ್ಯವಹಾರಗಳನ್ನು ನಡೆಸತಕ್ಕ ರೀತಿಯ ಬಗ್ಗೆ ;

(ಗ) 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಖ) ಖಂಡದ ಮೇರೆಗೆ ನಿಧಿಯಿಂದ ಅನುದಾನ ಕೊಡುವುದನ್ನು ನಿಯಂತ್ರಿಸುವ ಷರತ್ತುಗಳ ಬಗ್ಗೆ ;

(ಘ) 3ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಂದಾಜು ಮತ್ತು ವಿವರಪಟ್ಟಿಕೆಯ ನಮೂನೆಯ ಬಗ್ಗೆ ;

(ಙ) 5ನೇ ಪ್ರಕರಣದ ಮೇರೆಗೆ ನೇಮಿತರಾದ ಎಲ್ಲ ಅಧಿಕಾರಿಗಳ ಸೇವಾ ಷರತ್ತುಗಳ ಮತ್ತು ಕರ್ತವ್ಯಗಳ ಬಗ್ಗೆ ;

(ಚ) ಅಭ್ರಕ ಗಣಿಗಳ ಒಡೆಯರು ಅಥವಾ ಏಜೆಂಟರು ಅಥವಾ ವ್ಯವಸ್ಥಾಪಕರು ಅಂಕಿ ಅಂಶಗಳ ಅಥವಾ ಇತರ ಮಾಹಿತಿಯನ್ನು ಒದಗಿಸುವ ಬಗ್ಗೆ, ಮತ್ತು ಈ ಖಂಡದ ಮೇರೆಗೆ ಮಾಡಿದ ಯಾವುದೇ ನಿಯಮದ ಅಗತ್ಯತೆಗಳನ್ನು ಪಾಲಿಸುವುದರಲ್ಲಿ ವಿಫಲವಾದುದಕ್ಕೆ ಜುಲ್ಮಾನೆಯ ಮೂಲಕ ದಂಡನೆಯನ್ನು ವಿಧಿಸುವ ಬಗ್ಗೆ; ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರದಿಂದ ರಚಿತವಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಅದಷ್ಟು ಬೇಗನೇ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗ ಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ತದನಂತರ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

The above translation in Kannada of the Mica Mines Labour Fund Act 1946 (Act No. 22 of 1946) has been authorised by the President to be published in the Official Gazette under Clause (a) of Section 2 of the Authorised Translations (Central Laws) Act, 1973.

R. V. S. Peri Sastry,
*Secretary to the Government of India.*

WD P 4157